All India Radio: Bangalore
National Bulletin In Kannada
15.02.2026 1.10 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ಒಂದು ಲಕ್ಷ ಕೋಟಿ ರೂಪಾಯಿ ಅರ್ಬನ್ ಚಾಲೆಂಜ್ ಫಂಡ್ ಗೆ ಕೇಂದ್ರ ಸಂಪುಟ ಅನುಮೋದನೆ; ಪ್ರಧಾನಿ ನರೇಂದ್ರ ಮೋದಿ ಶ್ಲಾಘನೆ
2. ದೇಶಾದ್ಯಂತ ಮಹಾಶಿವರಾತ್ರಿಯ ಸಡಗರ; ಸಮಸ್ತ ನಾಗರಿಕರಿಗೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿಯವರಿಂದ ಶುಭಾಶಯ
3. ದೇಶದ ಮೊದಲ ಕೇಂದ್ರೀಯ ಬ್ಯಾಂಕ್ ಡಿಜಿಟಲ್ ಕರೆನ್ಸಿ ಆಧಾರಿತ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಕೇಂದ್ರ ಸಚಿವ ಅಮಿತ್ ಶಾ ಚಾಲನೆ
4. ಜಾಗತಿಕ ಸವಾಲುಗಳ ಪರಿಣಾಮಕಾರಿ ಪರಿಹಾರಕ್ಕೆ ವಿಶ್ವಸಂಸ್ಥೆಯಲ್ಲಿ ಸುಧಾರಣೆ ಅಗತ್ಯ- ಮ್ಯೂನಿಕ್‌ನಲ್ಲಿ ಸಚಿವ ಡಾ.ಎಸ್.ಜೈಶಂಕರ್ ಅಭಿಮತ
5. ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್: ದಿನದ ಮೊದಲ ಪಂದ್ಯದಲ್ಲಿ ವೆಸ್ಟ್ ಇಂಡೀಸ್‌ಗೆ ೧೩೪ ರನ್‌ಗಳ ಗುರಿ ನೀಡಿದ ನೇಪಾಳ

<><><><>

ಒಂದು ಲಕ್ಷ ಕೋಟಿ ರೂಪಾಯಿಗಳ ಅರ್ಬನ್ ಚಾಲೆಂಜ್ ಫಂಡ್-ಯುಸಿಎಫ್‌ಗೆ ಕೇಂದ್ರ ಸಂಪುಟ ಅನುಮೋದನೆ ನೀಡಿರುವುದನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ, ಈ ನಿಧಿಯು ಮಾರುಕಟ್ಟೆ ಹಣಕಾಸು, ಖಾಸಗಿ ಭಾಗವಹಿಸುವಿಕೆ ಮತ್ತು ನಾಗರಿಕ ಕೇಂದ್ರಿತ ಸುಧಾರಣೆಗಳನ್ನು ಬಳಸಿಕೊಂಡು, ಉತ್ತಮ ಗುಣಮಟ್ಟದ ನಗರ ಮೂಲಸೌಕರ್ಯವನ್ನು ಒದಗಿಸುತ್ತದೆ. ಈ ಉಪಕ್ರಮವು, ನಗರಗಳನ್ನು ದೇಶದ ಆರ್ಥಿಕ ಬೆಳವಣಿಗೆಯ ಪ್ರಮುಖ ಚಾಲಕ ಶಕ್ತಿಯಾಗಿಸುತ್ತದೆ ಎಂದು ತಿಳಿಸಿದ್ದಾರೆ. ಅರ್ಬನ್ ಚಾಲೆಂಜ್ ಫಂಡ್, ಗೃಹ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. ಒಟ್ಟು ಒಂದು ಲಕ್ಷ ಕೋಟಿ ರೂಪಾಯಿಗಳ ಕೇಂದ್ರ ನೆರವಿನೊಂದಿಗೆ ಈ ನಿಧಿಯು, ಸ್ಥಿತಿಸ್ಥಾಪಕ, ಉತ್ಪಾದಕ ಮತ್ತು ಅಂತರ್ಗತ ನಗರಗಳನ್ನು

ನಿರ್ಮಿಸುವ ಗುರಿ ಹೊಂದಿದೆ. ಈ ನಿಧಿಯು ೨೦೨೫-೨೬ನೇ ಹಣಕಾಸು ವರ್ಷದಿಂದ ೨೦೩೦-೩೧ನೇ ಹಣಕಾಸು ವರ್ಷಕ್ಕೆ ಕಾರ್ಯನಿರ್ವಹಿಸಲಿದ್ದು, ೨೦೩೩-೩೪ನೇ ಹಣಕಾಸು ವರ್ಷಕ್ಕೆ ವಿಸ್ತರಿಸಬಹುದಾದ ಅನುಷ್ಠಾನ ಅವಧಿಯನ್ನು ಹೊಂದಿರುತ್ತದೆ. ಈ ಉಪಕ್ರಮವು, ಮುಂದಿನ ಐದು ವರ್ಷಗಳಲ್ಲಿ ನಗರ ವಲಯದಲ್ಲಿ ಒಟ್ಟು ನಾಲ್ಕು ಲಕ್ಷ ಕೋಟಿ ರೂಪಾಯಿಗಳ ಹೂಡಿಕೆಗೆ ಕಾರಣವಾಗುತ್ತದೆ. ಇದು ಭಾರತದ ನಗರಾಭಿವೃದ್ಧಿ ವಿಧಾನದಲ್ಲಿ ಅನುದಾನ ಆಧಾರಿತ ಹಣಕಾಸಿನಿಂದ ಮಾರುಕಟ್ಟೆ-ಸಂಬಂಧಿತ, ಸುಧಾರಣೆ-ಚಾಲಿತ ಮತ್ತು ಫಲಿತಾಂಶ-ಆಧಾರಿತ ಮೂಲಸೌಕರ್ಯ ಸೃಷ್ಟಿಗೆ ಒಂದು ಮಾದರಿ ಬದಲಾವಣೆಯನ್ನು ಗುರುತಿಸುತ್ತದೆ.

<><><><>

ದೇಶಾದ್ಯಂತ ಇಂದು ಮಹಾಶಿವರಾತ್ರಿ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತಿದೆ. ಈ ದಿನವನ್ನು ಉಪವಾಸ, ವಿಶೇಷ ಪ್ರಾರ್ಥನೆ ಮತ್ತು ರಾತ್ರಿಯಿಡೀ ಪೂಜೆಯಿಂದ ಗುರುತಿಸಲಾಗುತ್ತದೆ. ವಿಶೇಷವಾಗಿ ಶೈವ ಕ್ಷೇತ್ರಗಳಲ್ಲಿ ಇಂದು ಪೂಜಾಕೈಂಕರ್ಯ, ಶಿವಸ್ಮರಣೆ, ಬಿಲ್ವಾರ್ಚನೆಗಳು ನಡೆಯುತ್ತಿವೆ. ಪ್ರಮುಖ ಶೈವಕ್ಷೇತ್ರಗಳಲ್ಲಿ ಅಹೋರಾತ್ರಿ ಭಜನೆ, ಸಂಕೀರ್ತನೆಗಳಿಗೆ ವ್ಯವಸ್ಥೆಯಾಗಿವೆ. ಹಲವೆಡೆ ವಿಶೇಷ ಪೂಜಾ, ಹೋಮ, ಜಾಗರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವಿವಿಧ ಶೈವಕ್ಷೇತ್ರಗಳಲ್ಲಿ ಜಾಗರಣೆಗಳಿಗೆ ವಿಶೇಷ ಮಹತ್ವ ದೊರೆತಿದ್ದು, ಸಹಸ್ರಾರು ಭಕ್ತರು ಶಿವನ ಲಿಂಗಾಭಿಷೇಕ, ಬಿಲ್ವಾರ್ಚನೆ ಹಾಗೂ ಮಹಾರಾತ್ರಿ ನಾಲ್ಕು ಕಾಲದ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ದೇವಾಲಯಗಳಲ್ಲಿ ರುದ್ರಾಭಿಷೇಕ, ರುದ್ರಪಾರಾಯಣೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ಶಿವರಾತ್ರಿ ಪ್ರಯುಕ್ತ ಉಪವಾಸಾಚರಣೆ ಹಾಗೂ ಭಜನೆ, ಕೀರ್ತನೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಭಕ್ತರು ಜಾಗರಣೆಯಿದ್ದು, ಶಿವನ ಕೃಪೆಗೆ ಪಾತ್ರರಾಗುವರು. ದೇಶಾದ್ಯಂತ ಮಹಾಶಿವರಾತ್ರಿ ಸಂಭ್ರಮದ ಈ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಜನತೆಗೆ ಶುಭಾಶಯ ತಿಳಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಹಾಶಿವರಾತ್ರಿಯ ಶುಭ ಸಂದರ್ಭದಲ್ಲಿ ದೇಶವಾಸಿಗಳಿಗೆ ಶುಭಾಶಯ ಕೋರಿದ್ದಾರೆ. ಶಿವನ ಕೃಪೆ ಎಲ್ಲಾ ನಾಗರಿಕರ ಮೇಲೆ ಇರಲಿ ಮತ್ತು ಭಾರತವು ಪ್ರಗತಿಯ ಹಾದಿಯಲ್ಲಿ ಮುಂದುವರಿಯಲಿ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪ್ರಾರ್ಥಿಸಿದ್ದಾರೆ. ಸಾಮಾಜಿಕ

ಮಾಧ್ಯಮದ ಪೋಸ್ಟ್‌ನಲ್ಲಿ ಉಪರಾಷ್ಟ್ರಪತಿ, ಕಾಶಿಯಿಂದ ರಾಮೇಶ್ವರದವರೆಗೆ, ಈ ಪವಿತ್ರ ಹಬ್ಬವು ದೇಶದ ಆಧ್ಯಾತ್ಮಿಕ ಸಂಪ್ರದಾಯದ ಜೀವಂತ ಸಂಕೇತವಾಗಿ ನಿಂತಿದೆ ಎಂದು ತಿಳಿಸಿದ್ದಾರೆ. ಮಹಾಶಿವರಾತ್ರಿಯ ಶುಭಾಶಯ ಕೋರಿರುವ ಪ್ರಧಾನಿ ನರೇಂದ್ರ ಮೋದಿ, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಮಹಾಶಿವನ ಕೃಪಾಕಟಾಕ್ಷದಿಂದ ಭಾರತವು ಸಮೃದ್ಧಿಯ ಶಿಖರದಲ್ಲಿ ನೆಲೆಯೂರಲಿ ಎಂದು ಪ್ರಾರ್ಥಿಸಿದ್ದಾರೆ.

<><><><>

ತಮಿಳುನಾಡಿನ  ಕೊಯಮತ್ತೂರಿನಲ್ಲಿರುವ ಇಶಾ ಯೋಗಕೇಂದ್ರದಲ್ಲಿ ಆಯೋಜಿಸಲಾಗಿರುವ ೩೩ನೇ ಮಹಾಶಿವರಾತ್ರಿ ಸಂಭ್ರಮಾಚರಣೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಸಚಿವರು, ಸಂಧ್ಯಾರತಿ, ವಿಶೇಷ ಪೂಜೆ, ಸಂಗೀತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಭಕ್ತಸಾಗರವನ್ನು ನಿಭಾಯಿಸುವ ನಿಟ್ಟಿನಲ್ಲಿ ಸುಮಾರು ಏಳು ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ರಕ್ಷಣಾ ಸಚಿವರೊಂದಿಗೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ಸೇರಿದಂತೆ ಅನೇಕ ಗಣ್ಯರು ಸಂಭ್ರಮಾಚರಣೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅಹೋರಾತ್ರಿ ಆಚರಣೆಗಳು ಧ್ಯಾನ ಲಿಂಗದಲ್ಲಿ ಪಂಚಭೂತ ಕ್ರಿಯೆಯೊಂದಿಗೆ ಆರಂಭವಾಗಲಿದ್ದು, ಬಳಿಕ ಲಿಂಗ ಭೈರವಿ ಮಹಾಯಾತ್ರೆ ನಡೆಯಲಿದೆ.

<><><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಗಾಂಧಿನಗರದ ಮಹಾತ್ಮ ಮಂದಿರದಲ್ಲಿ ಭಾರತದ ಮೊದಲ ಕೇಂದ್ರೀಯ ಬ್ಯಾಂಕ್ ಡಿಜಿಟಲ್ ಕರೆನ್ಸಿ ಆಧಾರಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಉದ್ಘಾಟಿಸಿದರು. ಗುಜರಾತ್ ಸರ್ಕಾರದ ಈ ಡಿಜಿಟಲ್ ಕರೆನ್ಸಿ ಉಪಕ್ರಮವು ಆಹಾರ ಧಾನ್ಯಗಳ ವಿತರಣೆಯನ್ನು ಹೆಚ್ಚು ಪಾರದರ್ಶಕ ಮತ್ತು ಸೋರಿಕೆ ನಿರೋಧಕವಾಗಿಸುವ ಗುರಿಯನ್ನು ಹೊಂದಿದೆ. ಈ ಕಾರ್ಯಕ್ರಮವು, ರಾಜ್ಯದ ಆಹಾರ ಭದ್ರತಾ ಜಾಲವನ್ನು ಬಲಪಡಿಸಲು ಧಾನ್ಯ ಎಟಿಎಂಗಳು ಮತ್ತು ವಿಶೇಷ ಪೌಷ್ಟಿಕಾಂಶ ಅಭಿಯಾನಗಳನ್ನು ಪರಿಚಯಿಸುವುದನ್ನು ಸಹ ಗುರುತಿಸುತ್ತದೆ.

<><><><>

ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್- ಐಎಮ್‌ಇಸಿ, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ವ್ಯಾಪಾರವನ್ನು ಖಚಿತಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಹೇಳಿದರು. ಮ್ಯೂನಿಕ್ ಭದ್ರತಾ ಸಮ್ಮೇಳನದಲ್ಲಿ ನಿನ್ನೆ ಮಾತನಾಡಿದ ಡಾ.ಎಸ್.ಜೈಶಂಕರ್, ಇಂದಿನ ಜಾಗತಿಕ ಸವಾಲುಗಳನ್ನು ಪರಿಹರಿಸುವಲ್ಲಿ ಪರಿಣಾಮಕಾರಿಯಾಗಿರುವುದನ್ನು ಖಚಿತಪಡಿಸಿಕೊಳ್ಳಲು ವಿಶ್ವಸಂಸ್ಥೆಯಲ್ಲಿ ಸುಧಾರಣೆ ತರುವುದು ಅಗತ್ಯವಿದೆ ಎಂದು ಒತ್ತಿ ಹೇಳಿದರು. ಭಾರತದ ತೈಲ ಸಂಗ್ರಹಣೆಯ ಕುರಿತು ಮಾತನಾಡಿದ ಸಚಿವರು, ಯುರೋಪ್ ಮತ್ತು ಪ್ರಪಂಚದ ಇತರ ಭಾಗಗಳಂತೆ ಭಾರತದಲ್ಲಿನ ತೈಲ ಕಂಪನಿಗಳು ಲಭ್ಯತೆ, ವೆಚ್ಚ ಮತ್ತು ಅಪಾಯವನ್ನು ನೋಡುತ್ತವೆ ಮತ್ತು ಅವರು ಉತ್ತಮ ಹಿತಾಸಕ್ತಿ ಎಂದು ಭಾವಿಸುವ ನಿರ್ಧಾರವನ್ನು ತೆಗೆದುಕೊಳ್ಳುತ್ತವೆ ಎಂದು ಹೇಳಿದರು. ಮ್ಯೂನಿಕ್ ಭದ್ರತಾ ಸಮ್ಮೇಳನದ ಹೊರತಾಗಿ ವಿದೇಶಾಂಗ ಸಚಿವರು ಜಿ-೭ ವಿದೇಶಾಂಗ ಸಚಿವರನ್ನು ಭೇಟಿಯಾದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಹೇರತ್ ಪೋಶ್ಟೆ ಸಂದರ್ಭದಲ್ಲಿ ಕಾಶ್ಮೀರಿ ಪಂಡಿತ ಸಮುದಾಯಕ್ಕೆ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ ಅವರು, ಈ ಹಬ್ಬವು ಸಮುದಾಯದ ಶ್ರೀಮಂತ ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ. ಪ್ರತಿಯೊಬ್ಬರ ಜೀವನದಲ್ಲೂ ಯೋಗಕ್ಷೇಮ ಮತ್ತು ಸಮೃದ್ಧಿಯನ್ನು ಪ್ರಧಾನಿ ಹಾರೈಸಿದ್ದು, ಈ ಶುಭ ಸಂದರ್ಭವು ಯಶಸ್ಸಿನ ಹೊಸ ಹಾದಿಗಳನ್ನು ತೆರೆಯಲಿ ಎಂದು ಆಶಿಸಿದ್ದಾರೆ.

<><><>

ಭಾರತೀಯ ಸೇನೆಯ ಸಿಗ್ನಲ್ಸ್ ಕಾರ್ಪ್ಸ್ ಇಂದು ತನ್ನ ೧೧೩ ನೇ ಸಂಸ್ಥಾಪನಾ ದಿನವನ್ನು ಆಚರಿಸುತ್ತಿದೆ. ೧೯೧೧ ರಲ್ಲಿ ಈ ದಿನದಂದು ಸ್ಥಾಪನೆಯಾದಾಗಿನಿಂದ, ಸಿಗ್ನಲ್ಸ್ ಕಾರ್ಪ್ಸ್ ಭಾರತೀಯ ಸೇನೆಯ ಸಂವಹನ ತಂತ್ರಗಳನ್ನು ಪರಿವರ್ತಿಸಿದೆ. ಇಂದಿನ ಬಹು ಆಯಾಮದ ಬೆದರಿಕೆ ಪರಿಸರದಲ್ಲಿ ಕಾರ್ಯನಿರ್ವಹಿಸಲು ಭಾರತೀಯ ಸೇನೆಯ ಸವಾಲಿನ ಅವಶ್ಯಕತೆಗಳನ್ನು ಪೂರೈಸಲು ಅತ್ಯಾಧುನಿಕ ಸಂವಹನ ತಂತ್ರಗಳನ್ನು ಬಳಸಿಕೊಳ್ಳಲು ಕಾರ್ಪ್ಸ್ ಸಜ್ಜಾಗಿದೆ.

<><><>

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ದಿನದ ಮೊದಲ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ ತಂಡ, ವೆಸ್ಟ್ ಇಂಡೀಸ್‌ಗೆ ೧೨೪ ರನ್‌ಗಳ ಗೆಲುವಿನ ಗುರಿ ನೀಡಿದೆ. ನೇಪಾಳ ತಂಡ, ನಿಗದಿತ ೨೦ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೧೨೨ ರನ್ ಗಳಿಸಿತು. ಮಧ್ಯಾಹ್ನ ೩ ಗಂಟೆಗೆ ಚೆನ್ನೈನಲ್ಲಿ ಆರಂಭವಾಗಲಿರುವ ಪಂದ್ಯದಲ್ಲಿ ಅಮೆರಿಕ ಹಾಗೂ ನಮಿಬಿಯಾ ಮುಖಾಮುಖಿಯಾಗಲಿವೆ. ಕೊಲೊಂಬೋದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡ ತನ್ನ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ, ಪಂದ್ಯ ಭಾರತೀಯ ಕಾಲಮಾನ ಸಂಜೆ ೭ ಗಂಟೆಗೆ ಪ್ರಾರಂಭವಾಗಲಿದೆ. ಉಭಯ ತಂಡಗಳು ಎರಡು ಪಂದ್ಯಗಳಿಂದ ತಲಾ ೪ ಅಂಕಗಳನ್ನು ಗಳಿಸಿವೆ.

<><><><>

ಅಮೆರಿಕದ ಸಿಡ್ನಿಯಲ್ಲಿ ಇಂದು ಆರಂಭಾಗುತ್ತಿರುವ ಮೂರು ಪಂದ್ಯಗಳ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ಮೊದಲನೇ ಪಂದ್ಯದಲ್ಲಿಂದು ಭಾರತ ಹಾಗೂ ಆಸ್ಟ್ರೇಲಿಯಾ ವನಿತಾ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ಅಪರಾಹ್ನ ೧.೪೫ ಕ್ಕೆ ಆರಂಭವಾಗಲಿದೆ.

<><><><>

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ರಾಜ್ಯದಲ್ಲಿ ಪ್ರಮುಖ ವಾಯುಯಾನ ಮೂಲಸೌಕರ್ಯ ಉಪಕ್ರಮಗಳನ್ನು ಘೋಷಿಸಿದ್ದಾರೆ. ಮೊರಾನ್‌ನಲ್ಲಿ ತುರ್ತು ಲ್ಯಾಂಡಿಂಗ್ ಸೌಲಭ್ಯವನ್ನು ಸಮರ್ಥಿಸಿಕೊಂಡಿರುವ ಅವರು, ಇದು ರಾಷ್ಟ್ರೀಯ ಭದ್ರತಾ ಆಸ್ತಿಯಾಗಿದ್ದು ಅದನ್ನು ಕ್ಷುಲ್ಲಕಗೊಳಿಸಬಾರದು ಎಂದು ಪ್ರತಿಪಾದಿಸಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>